# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 713 |
| ಸದಸ್ಯರ ಹೆಸರು | : | ಡಾ: ಚಂದ್ರಶೇಖರ್ ಬ. ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೀದರ್ ಜಿಲ್ಲೆಯಿಂದ ಗುಲ್ಬರ್ಗಾಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ರಸ್ತೆಯು ಹದಗೆಟ್ಟಿದ್ದು ದುರಸ್ಥಿಯಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಷ್ಟ್ರೀಯ ಹೆದ್ದಾರಿ-50ರ ಬೀದರ್‌ನಿಂದ ಹುಮ್ನಾಬಾದ್ ಭಾಗದ ರಸ್ತೆಯು ರಾಷ್ಟ್ರೀಯ ಹೆದ್ದಾರಿ ವಲಯದ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ ಹಾಗೂ ಹುಮ್ನಾಬಾದ್ ನಿಂದ ಗುಲ್ಬರ್ಗಾವರೆಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ ಒಳಪಡುತ್ತಿದ್ದು, ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ದುರಸ್ಥಿ ಕಾಮಗಾರಿಗೆ ಯಾವಾಗ ಚಾಲನೆ ನೀಡಲಾಗುವುದು; | **ಬೀದರ್‌ನಿಂದ ಹುಮ್ನಾಬಾದ್ ಭಾಗ:**<br>ರಾಷ್ಟ್ರೀಯ ಹೆದ್ದಾರಿ-50ರ ಬೀದರ್‌ನಿಂದ ಹುಮ್ನಾಬಾದ್ ಭಾಗದ ರಸ್ತೆಯ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದೆ. ಸದರಿ ಹೆದ್ದಾರಿಯ ಕಿ.ಮೀ.54.370 ರಿಂದ 101.400 ಕಿ.ಮೀ ವರೆಗೆ ಸುಮಾರು 47.03 ಕಿ.ಮೀ. ಉದ್ದಕ್ಕೆ ಅಬಿವೃದ್ಧಿಪಡಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಮಂಜೂರಾತಿ ದೊರೆತಿದ್ದು, ಈ ಪೈಕಿ 38.90 ಕಿ.ಮೀ. ರಸ್ತೆ ಅಭಿವೃದ್ಧಿ ಪಡಿಸಲಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಉಳಿದ 8.13 ಕಿ.ಮೀ. ರಷ್ಟು ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದ್ದು, ದಿನಾಂಕ:17.03.2024 ರೊಳಗೆ ಪೂರ್ಣಗೊಳಿಸಲಾಗುವುದು ಹಾಗೂ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.<br><br>**ಹುಮ್ನಾಬಾದ್‌ನಿಂದ ಗುಲ್ಬರ್ಗಾ ಭಾಗ:**<br>ರಾಷ್ಟ್ರೀಯ ಹೆದ್ದಾರಿ-50ರ ಹುಮ್ನಾಬಾದ್‌ನಿಂದ ಗುಲ್ಬರ್ಗಾ ಭಾಗದ ರಸ್ತೆಯನ್ನು ಈಗಾಗಲೇ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲಾಗಿದ್ದು, ಗುತ್ತಿಗೆ ಕರಾರಿನಂತೆ ಮೆ: ಎಲ್&ಟಿ ಲಿಮಿಟೆಡ್‌ರವರು ರಸ್ತೆಯನ್ನು ನಿರ್ವಹಣೆ ಮಾಡುತ್ತಿರುತ್ತಾರೆ. ಸದರಿ ಭಾಗದ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

| | | |
|---|---|---|
| ಇ) | ರಾಷ್ಟ್ರೀಯ ಹೆದ್ದಾರಿ ರಸ್ತೆಗಳಿಗೆ ದುರಸ್ಥಿ ಕಾರ್ಯಗಳನ್ನು ಎಷ್ಟು ವರ್ಷಕ್ಕೊಮ್ಮೆ ಕೈಗೊಳ್ಳಲಾಗುವುದು? (ವಿವರ ಒದಗಿಸುವುದು) | ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ Standard Contract agreement ಅನ್ವಯ ರಸ್ತೆಯನ್ನು Flexible Pavement ನಿಂದ ನಿರ್ಮಾಣ / ಅಭಿವೃದಿಪಡಿಸಿದ್ದಲ್ಲಿ 5 ವರ್ಷದ ನಿರ್ವಹಣಾ ಅವಧಿ ಹಾಗೂ Rigid pavement ನಿಂದ ನಿರ್ಮಾಣ/ ಅಭಿವೃದಿಪಡಿಸಿದ್ದಲ್ಲಿ 10 ವರ್ಷಗಳ ನಿರ್ವಹಣಾ ಅವಧಿಯಾಗಿರುತ್ತದೆ. ಅಲ್ಲದೆ ನಿರ್ವಹಣಾ ಅವಧಿ ಪೂರ್ಣಗೊಂಡ ಹೆದ್ದಾರಿಗಳ ಸ್ಥಿತಿಗತಿಗಳನ್ನಾಧರಸಿ ಆಧ್ಯತೆಯ ಮೇರೆಗೆ ನಿರ್ವಹಣೆಯನ್ನು ಕೈಗೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಕೈಗೊಳ್ಳಲಾಗುವುದು. |

ಕಡತ ಸಂಖ್ಯೆ: ಲೋಇ 60 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು